1	2	3	4	5
26.			ಆಸಿಕೆರೆ	ಮರಟಿಕೊಪ್ಪ
27.			ಕುಚ್ಚೋಡಿ	ಕುಚ್ಚೋಡಿ
28.			ಕುಚ್ಚೋಡಿ	ಕನಸಗೇರಿ
29.			ಸಾಲಕೋಡ್	ಹೊಯನೀರು
30.			ಕುದರಿಗಿ	ಜನತಳ್ಳಿ

4852(5665) ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶರಾವತಿ ಸೇತುವೆ ನಿರ್ಮಾಣಕ್ಕೆ ತಗಲಿರುವ ವೆಚ್ಚದ ಕರಾಕರಣೆ ಇನ್ನು ಎಷ್ಟು ವರ್ಷದವರೆಗೆ ಮುಂದುವರೆಯುವುದು,

ಆ) ಟೋಲ್ ನಾಕಾ ಟೆಂಡರ್ ಅವಧಿ ನವೀಕರಿಸಿದೆಯೇ; ಟೆಂಡರ್ ಅವಧಿ ಮುಗಿದರೂ ಸಹ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ 2004-05ರಲ್ಲಿ ವಸೂಲಿಯಾದ ಕರಾಕರಣೆ ಎಷ್ಟು? (ವಿವಿಧ ವಾಹನಗಳಿಗೆ ವಿಧಿಸಿರುವ ಕರಾಕರಣೆಯ ವಿವರ ಒದಗಿಸುವುದು)

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಶರಾವತಿ ಸೇತುವೆಯ ದುರಸ್ತಿಗೆ ಖರ್ಚು ಮಾಡಲಾದ ಮೊತ್ತ ರೂ.10.32 ಕೋಟಿಗಳು. ರೂ.7.75,96,959-00 ಗಳಷ್ಟು ಕರಾಕರಣೆ ಇಲ್ಲಿಯವರೆಗೆ ವಸೂಲಾಗಿರುತ್ತದೆ. ನಿರ್ವಹಣಾ ಮತ್ತು ದುರಸ್ತಿ ವೆಚ್ಚ ಮತ್ತು ಅದರ ಮೇಲಿನ ಬಡ್ಡಿ ಒಳಗೊಂಡಂತೆ ಬಂಡವಾಳದ ಹಣ ವಸೂಲು ಆಗುವ ತನಕ ಹಾಗೂ ಕೇಂದ್ರ ಸರ್ಕಾರದ ಭೂ ಸಾರಿಗೆ ಇಲಾಖೆ ನೀಡಬಹುದಾದ ಮಾರ್ಗದರ್ಶನವನ್ನು ಅವಲಂಬಿಸಿ ಕರಾಕರಣೆ ಮುಂದುವರೆಯುತ್ತದೆ.

ಟೋಲ್ ನಾಕಾ ಟೆಂಡರನ್ನು ಜುಲೈ 2005 ರಿಂದ ಜೂನ್ 2008 ರ ಅವಧಿಯವರೆಗೆ ನವೀಕರಿಸಲಾಗಿದೆ, ಟೆಂಡರ್ ಅವಧಿ 30.4.2005 ರಂದು ಮುಗಿದಿದ್ದು, ಮರು ಟೆಂಡರ್ ಪ್ರೋಸೆಸಿಂಗ್ ಮಧ್ಯಂತರ ಅವಧಿಯ

ಕಾಲದಲ್ಲಿ(ನವೀಕರಣದ ಮುನ್ನ) ಸಕ್ಷಮ ಪ್ರಾಧಿಕಾರದ ಅನುಮೋದನೆ ಯೊಡನೆ ಹಣ ವಸೂಲು ಮಾಡಲಾಗುತ್ತಿತ್ತು.

ಇ) 2004–05ರಲ್ಲಿ ಒಟ್ಟು 1,02,74,472–22 ರೂಪಾಯಿಗಳು ಕರಾಕರಣೆ ಮಾಡಲಾಗಿದ್ದು, ಸದರಿ ಮೊತ್ತವನ್ನು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ಕಛೇರಿಗೆ ಸಂದಾಯ ಮಾಡಲಾಗಿರುತ್ತದೆ.

ಭಾರತ ಸರ್ಕಾರ ನಿರ್ಧರಿಸಿದ ವಾಹನ ಶುಲ್ಕ ಈ ಕೆಳಗಿನಂತಿವೆ:

	ವಿಧಿಸಿರುವ ಕರಾಕರಣ ಒಂದು ಪ್ರಯಾಣಕ್ಕೆ	ಅದೇ ದಿನದ ಮರು ಪ್ರಮಾಣಕ್ಕೆ
ಲಘುವಾಹನಗಳು: ಕಾರು:ಜೀಪು:ಇತ್ಯಾದಿ	5–00	7.50
ಸರಕು ಸಾಗಾಣಿಕೆ ಲಘು ವಾಹನಗಳು	10–00	15–00
ಲಾರಿ,ಬಸ್ಸು, ಮಲ್ಟಿ ಎಕ್ಸಲ್ ಭಾರಿ ವಾಹನಗಳು	15–00	22–50

4854(5044) ಶ್ರೀ ಶಿವಣ್ಣ ಎಸ್. (ತುಮಕೂರು): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಬಾರ್ಡ್ ಯೋಜನೆಯಡಿ ಅಭಿವೃದ್ಧಿಪಡಿಸಲಾದ ಗ್ರಾಮಾಂತರದ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಯ ವಶಕ್ಕೆ ತೆಗೆದುಕೊಳ್ಳುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ತುಮಕೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ಯಾವ ಯಾವ ರಸ್ತೆಗಳನ್ನು ಇಲಾಖಾ ವಶಕ್ಕೆ ತೆಗೆದುಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳಲಾಗಿದೆ? ವಿವರ ನೀಡುವುದು.